ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1100(1267)
ಸದಸ್ಯರ ಹೆಸರು	:	ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡತಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ನಗರದ ಪ್ರಮುಖ ರಸ್ತೆಗಳಾದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ದೇವರಾಜು ಅರಸು ರಸ್ತೆಗಳು ಹಾಳಾಗಿ, ಸಾರ್ವಜನಿಕ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ರಸ್ತೆಗಳನ್ನು ದುರಸ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೆ.	• 2019-20ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ಪುರಸಭೆಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಪತ್ರ ಸಂಖ್ಯೆ:ನಅಇ 219 ಎಸ್.ಎಫ್.ಸಿ 2019, ದಿನಾಂಕ:07-09-2019 ರಲ್ಲಿ ರೂ.200.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ. • ಸದರಿ ಅನುದಾನದಲ್ಲಿ ರೂ.190.00 ಲಕ್ಷಗಳಿಗೆ ಗುಂಡ್ಲುಪೇಟೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಒಂದಾದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯನ್ನೂ ಒಳಗೊಂಡು ನೆಹರು ಸರ್ಕಲ್ ಸುತ್ತ, ಹಳೇ ಬಸ್ ನಿಲ್ದಾಣದ ರಸ್ತೆ, ಕೆ.ಆರ್.ಸಿ ರಸ್ತೆ, ರಾಮ ಮಂದಿರದಿಂದ ಎಸ್.ಆರ್. ರಸ್ತೆ ಹಾಗೂ ಚಾಮರಾಜನಗರ ರಸ್ತೆಯವರೆಗೂ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. • ದೇವರಾಜೇಅರಸು ರಸ್ತೆ ಅಭಿವೃದ್ಧಿಪಡಿಸಲು ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ-2ರ ಯೋಜನೆಯಡಿ ಕಾಮಗಾರಿ ಕೈಗೊಂಡು ಪೂರ್ಣಗೊಂಡಿರುತ್ತದೆ. ರಸ್ತೆಯು ಸುಸ್ಥಿತಿಯಲ್ಲಿದ್ದು, ಎರಡು ಬದಿ ಚರಂಡಿ ಅಭಿವೃದ್ಧಿಯು ಬಾಕಿ ಇರುತ್ತದೆ.
ಆ)	ಗುಂಡ್ಲುಪೇಟೆ ನಗರದಲ್ಲಿ ಒಳಚರಂಡಿ ಕಾಮಗಾರಿಗೆ ರಸ್ತೆಗಳನ್ನು ಅಗೆದಿದ್ದು, ಎಲ್ಲೆಲ್ಲಿ ಒಳಚರಂಡಿ ಕಾಮಗಾರಿ ಮುಗಿದಿದೆ; ಅಲ್ಲಿ ರಸ್ತೆಗಳನ್ನು ದುರಸ್ತಿ ಮಾಡಿ ಡಾಂಬರು ಹಾಕಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?	ಗುಂಡ್ಲುಪೇಟೆ ಪಟ್ಟಣದ ಒಳಚರಂಡಿ ಕಲ್ಪಿಸುವ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ/542/ ಇ.ಎಕ್ಸ್.ಪಿ.ಇ/ 2006-07, ದಿನಾಂಕ:09/10/2006 ರಲ್ಲಿ ರೂ.6.78 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯಡಿ ಆಂತರಿಕ ಹಾಗೂ ಹೊರಹರಿವು ಕೊಳವೆಗಳನ್ನು ಅಳವಡಿಸುವ ಟೆಂಡರ್ ಕಾಮಗಾರಿಯನ್ನು ದಿನಾಂಕ: 27/09/2007 ರಂದು ಗುತ್ತಿಗೆದಾರರಿಗೆ ವಹಿಸಲಾಗಿರುತ್ತದೆ. 44.60 ಕಿಮೀ ಆಂತರಿಕ ಹಾಗೂ ಹೊರಹರಿವು ಕೊಳವೆಗಳನ್ನು ಅಳವಡಿಸಿ, 1810 ಸಂಖ್ಯೆ ಆಳುಗುಂಡಿಗಳನ್ನು ನಿರ್ಮಿಸಿ, 2011ನೇ ಇಸವಿಯಲ್ಲಿ ಪೂರ್ಣಗೊಸಲಾಗಿದೆ. ಈ ಯೋಜನೆಯಡಿ ಪಟ್ಟಣದ ಹೆಚ್.ಎಸ್.ಎಂ ನಗರ, ಜಾಕಿರ್ ಹುಸೇನ್ ನಗರ, ಕೆಹೆಚ್‌ಬಿ ಕಾಲೋನಿ, ಬಾಬು ಜಗಜೀವನ್ ರಾಮ್ ನಗರ, ಅಂಬೇಡ್ಕರ್ ನಗರ, ಪೌರ ಕಾರ್ಮಿಕರ ಕಾಲೋನಿ, ಕೆ.ಎಸ್ ನಾಗರತ್ನಮ್ಮ ಎಕ್ಸ್‌ಟೆನ್ಷನ್, ದ.ರಾ.ಬೇಂದ್ರೆ ನಗರ, ಕುವೆಂಪು ನಗರ, ಅಶ್ವಿನಿ ನಗರ, ಜನತಾ ಕಾಲೋನಿ, ವಿನಾಯಕ ನಗರ,

		ಬಸವೇಶ್ವರ ನಗರ ಸೇರಿದಂತೆ 44.60 ಕಿಮೀ ಆಂತರಿಕ ಹಾಗೂ ಹೊರಹರಿವು ಕೊಳವೆಮಾರ್ಗಗಳನ್ನು ಅಳವಡಿಸಿ, 1810 ಸಂಖ್ಯೆ ಆಳುಗುಂಡಿಗಳ ನಿರ್ಮಾಣ ಕಾಮಗಾರಿಗಳನ್ನು 2011ನೇ ಸಾಲಿನಲ್ಲಿ ಪೂರ್ಣಗೊಳಸಲಾಗಿರುತ್ತದೆ. ಒಳಚರಂಡಿ ಕಾಮಗಾರಿಗಳು ಶೇ.೯೦ರಷ್ಟು ಮುಗಿದಿದ್ದು, ಒಳಚರಂಡಿ ಕಾಮಗಾರಿಗೆ ಅಗೆದಿರುವ ರಸ್ತೆಗಳನ್ನು ಈಗಾಗಲೇ ಕೆಲವು ಕಡೆ ದುರಸ್ಥಿಪಡಿಸಲಾಗಿದ್ದು, ಇನ್ನೂ ಉಳಿದ ರಸ್ತೆಯ ದುರಸ್ಥಿಯನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ದುರಸ್ಥಿಪಡಿಸಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 110 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡತಳತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು